ಓ ಎಸ್ ನಂ. 94/2021

ಪಿ ಡಬ್ಲ್ಯು 4

ದಿನಾಂಕ 09/03/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ

ವಾದಿ ಪ್ರಕಾಶ್ ರವರು ನನಗೆ ಸುಮಾರು ೫೦ ವರ್ಷಗಳಿಂದ ಪರಿಚಯ ಇರುತ್ತಾರೆ. ಯಾವ ರೀತಿ ಪರಿಚಯ ಎಂದರೆ ಸಾಕ್ಷಿ ನನ್ನ ಮಗಳನ್ನು ವಾದಿಯ ಅಣ್ಣ ಜಯಣ್ಣರವರಿಗೆ ಕೊಟ್ಟು ವಿವಾಹ ಮಾಡಿರುತ್ತೇನೆ, ವಾದಿ ಪ್ರಕಾಶ್ ರವರ ಅಕ್ಕನಾದ ಗಂಗಮ್ಮರವರನ್ನು ನಾನು ವಿವಾಹ ಆಗಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮತ್ತು ಗಂಗಮ್ಮರವರ ವಿವಾಹ ಆಗಿ ಸುಮಾರು 40 ವರ್ಷಗಳಾಗಿರುತ್ತವೆ. ನನಗೆ ಈಗ 75 ವರ್ಷ ವಯಸ್ಸಾಗಿರುತ್ತದೆ. ನನ್ನ ಮದುವೆ ಕಾಲಕ್ಕೆ ಕಲ್ಲೇಶಪ್ಪರವರು ಬದುಕಿದ್ದರು. ಕಲ್ಲೇಶಪ್ಪರವರ ಮಕ್ಕಳಾದ ಪ್ರಕಾಶ್, ಜಯಣ್ಣ, ಚಂದ್ರಶೇಖರಪ್ಪ ಮತ್ತು ನಿಂಗಪ್ಪರವರು ಯಾವಾಗ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ 1971 ರಲ್ಲಿ ಎಂದು ನುಡಿಯುತ್ತಾರೆ. ಸದರಿ ವಿಭಾಗದಲ್ಲಿ ನಿಂಗಪ್ಪರವರಿಗೆ ಯಾವ ಆಸ್ತಿಗಳು ಬಂದವು ಎಂದರೆ ಸಾಕ್ಷಿ ನಿಖರವಾಗಿ ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರಕಾಶ್, ಜಯಣ್ಣ, ಚಂದ್ರಶೇಖರಪ್ಪ ರವರ ನಡುವೆ ಯಾವಾಗ ವಿಭಾಗ ಆಗಿದೆ ಎಂದರೆ ಸಾಕ್ಷಿ 1971 ರಲ್ಲಿ ಎಂದು ನುಡಿಯುತ್ತಾರೆ. ವಿಭಾಗದಲ್ಲಿ ಕಲ್ಲೇಪಶಪ್ಪರವರಿಗೆ ಸೇರಿದ ಯಾವ ಯಾವ ಆಸ್ತಿಗಳನ್ನು

ಸೇರಿಸಲಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಭಾಗದಲ್ಲಿ ಜಯಣ್ಣರವರ ಹಿಸ್ಸೆಗೆ ಯಾವ ಯಾವ ಸರ್ವೆ ನಂಬರುಗಳನ್ನು ನೀಡಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪ್ರಕಾಶ್ ರವರ ಹಿಸ್ಸೆಗೆ ಸರ್ವೆ ನಂ.156 ರ ಪೈಕಿ 13 ಗುಂಟೆ ಸ್ವತ್ತು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.156 ರಲ್ಲಿ ಕಲ್ಲೇಶಪ್ಪರವರಿಗೆ ಸೇರಿದ ಒಟ್ಟು ಎಷ್ಟು ಆಸ್ತಿ ಇತ್ತು ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸರ್ವೆ ನಂ.156/5 ರಲ್ಲಿ ನನ್ನ ಅಳಿಯ ಜಯಣ್ಣರವರ ಹೆಸರಿಗೆ 14 ಗುಂಟೆ ಜಮೀನು ಹೋಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ 14 ಗುಂಟೆ ಜಮೀನನ್ನು ಜಯಣ್ಣರವರು ಪ್ರಕಾಶ್ ರವರಿಗೆ ವಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.156/8 ರಲ್ಲಿ 13 ಗುಂಟೆ ಜಮೀನನ್ನು ನೇ ಪ್ರತಿವಾದಿ ಚಂದ್ರಶೇಖರಪ್ಪರವರ ಹೆಸರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಜಮೀನನ್ನು ವಾದಿ ಹೆಸರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.156/6 ರಲ್ಲಿ ವಾದಿ ಪ್ರಕಾಶ್ ರವರ ಹೆಸರಿಗೆ 13 ಗುಂಟೆ ಜಮೀನು ಬಂದಿರುತ್ತದೆ ವಿನಃ ಸರ್ವೆ ನಂ.156/8 ರಲ್ಲಿ ಅಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪ್ರಕಾಶ್ ರವರ ಹೆಸರಿಗೆ ಸರ್ವೆ ನಂ.156/8 ರಲ್ಲಿ 13 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಖಾತೆ ಇಂದಿಗೂ ಸಹ 1 ನೇ ಪ್ರತಿವಾದಿಯಾದ ಚಂದ್ರಶೇಖರಪ್ಪರವರ ಹೆಸರಿಗೆ ವಿಭಾಗದಂತೆ ಖಾತೆ ಬಂದಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ

ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.156/6 ರ 13 ಗುಂಟೆ ಜಮೀನು ವಾದಿ ಪ್ರಕಾಶ್ ರವರ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.156 ರಲ್ಲಿ ಪ್ರಕಾಶ್, ಚಂದ್ರಶೇಖರಪ್ಪ ಮತ್ತು ಜಯಣ್ಣರವರ ನಡುವೆ ಈಗಾಗಲೇ ವಿಭಾಗ ಆಗಿದ್ದರೂ ಸಹ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ವಾದಿ ನನ್ನನ್ನು ಕರೆದುಕೊಂಡು ಬಂದು ಸುಳ್ಳು ಸಾಕ್ಷ್ಯ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ಕಲ್ಲೇಶಪ್ಪರವರ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿರುತ್ತೇನೆ ಎಂದು ಹೇಳಲಾದ ಪತ್ರದಲ್ಲಿ ಯಾರು ಯಾರಿಗೆ ಯಾವ ಯಾವ ಆಸ್ತಿಗಳನ್ನುನೀಡಲಾಗಿದೆ ಎಂದು ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ಯಾವುದೇ ಪಾಲುಪರಿಕತ್ತು ಆಗದೆ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.